





ದಿನಾಂಕ:14-07-2023 ರಂದು ನಡೆದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮ್ಯಯನವರು ಭಾಗವಹಿಸಿ ತೆರಳುತ್ತಿರುವ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಕಛೇರಿಗೆ ಸೌಜನ್ಯದ ಭೇಟಿ ನೀಡಿ ಕುಶಲೋಪರಿ ವಿಚಾರಿಸಿದರು. ಬಸವಣ್ಣನವರ ಆಶಯಗಳನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ .ಹೊರಟ್ಟಿ ಅವರು ಶಾಸನಸಭೆಯಲ್ಲಿ ಆಚರಣೆ ತರುತ್ತಿರುವುದನ್ನು ಪ್ರಶಂಸಿಸಿ, ಈ ಜಗತ್ತಿನ ಮೊದಲ ಸಂಸತ್ತಿನ ಭಾವಚಿತ್ರ ಅನುಭವ ಮಂಟಪದ ಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ವಚನಗಾರ್ತಿ ಅಕ್ಕಮಹಾದೇವಿಯವರೊಂದಿಗೆ ಚರ್ಚಿಸುತ್ತಿರುವ ಈ ಚಿತ್ರ ತುಂಬಾ ಮನಮೋಹಕವಾಗಿದೆ. ಇಂತಹ ಸುಂದರ ಚಿತ್ರವನ್ನು ನಿಮ್ಮ ಕಛೇರಿಯಲ್ಲಿ ಅಳವಡಿಸಿದ್ದಕ್ಕೆ ನಿಮ್ಮನ್ನು ನಾನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸಭಾಪತಿಯವರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಹಾಗೂ ವಿಶೇಷಾಧಿಕಾರಿ ಶ್ರೀಮತಿ ಶೈಲಾ ಕೆ.ಡಿ ಉಪಸ್ಥಿತರಿದ್ದರು.